<u>ರಾಮನಗರದ 1ನೇ ಅಪರ ಹಿರಿಯ ಸಿವಿಲ್ ಮತ್ತು</u>
<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>

<u>C.C. 108/2023</u>

<u>CW-1/ PW-1</u>

| | | |
|---|---|---|
| ಹೆಸರು | :- | ನಂದೀಶ್ |
| ತಂದೆ/ಗಂಡನ ಹೆಸರು | :- | ಮರಿಸ್ವಾಮಯ್ಯ |
| ವಯಸ್ಸು | :- | 42 ವರ್ಷ |
| ವೃತ್ತಿ | :- | ಬಟ್ಟೆ ವ್ಯಾಪಾರ |
| ವಾಸ ಸ್ಥಳ | :- | ಬೆಂಗಳೂರು |
| ದಿನಾಂಕ | :- | 04.03.2026 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ಆರೋಪಿಗಳು ನನ್ನ ಸಂಬಂಧಿಕರು. ಆರೋಪಿಗಳಿಗೂ ನನಗೂ ಸಣ್ಣ ಪುಟ್ಟ ವಿಚಾರಕ್ಕೆ ಗಲಾಟೆಯಾದಾಗ ಪೊಲೀಸ್ ಠಾಣೆಗೆ ಹೋದಾಗ ನಾನು ನೋಡುತ್ತಿರುವ ದೂರಿನಲ್ಲಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿನಾಂಕ 10.03.2023ರಂದು ನಾನು ಯಾವುದೇ ಮರು ಹೇಳಿಕೆ ನೀಡಿಲ್ಲ.

(ಮಾನ್ಯ ಎ.ಪಿ.ಪಿ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ದಿನಾಂಕ 01.03.2023ರಂದು ರಾತ್ರಿ 11-45ರ ಸಮಯದಲ್ಲಿ ಅಂಜನಾಪುರ ಗ್ರಾಮದಲ್ಲಿ ಆರೋಪಿಗಳು ಜಮೀನಿನ ವಿಚಾರವಾಗಿ ಗಲಾಟೆ ಮಾಡುವ ಏಕ ಉದ್ದೇಶದಿಂದ ಗುಂಪುಕಟ್ಟಿಕೊಂಡು ಬಂದು ನನಗೆ ಮತ್ತು ಚಾಸಾ-2 ರಿಂದ

ಚಾಸಾ-5ರವರಿಗೆ ಕೈಗಳಿಂದ ಹೊಡೆದು, ನಮ್ಮೆಲ್ಲರಿಗೂ ಅವಾಚ್ಯ ಶಬ್ದಗಳಿಂದ ಬೈದು 1ನೇ ಆರೋಪಿಯು ನನಗೆ, ಚಾಸಾ-3 ಮತ್ತು ಚಾಸಾ-4ರವರನ್ನು ದೊಣ್ಣೆಯಿಂದ ಬಲಗೈ ಎಡಗೈ ತಲೆಗೆ ಹೊಡೆದು ತೀವ್ರ ಸ್ವರೂಪದ ಗಾಯಗಳನ್ನು ಪಡಿಸಿರುತ್ತಾರೆ. 2ನೇ ಆರೋಪಿಯು ಚಾಸಾ-2ರವರಿಗೆ ಕುಡುಗೋಲಿನಿಂದ ತಲೆಯ ಎಡಭಾಗಕ್ಕೆ ಹೊಡೆದು ಸಾಧಾರಣ ಸ್ವರೂಪದ ಗಾಯಪಡಿಸಿರುತ್ತಾರೆ. 5ನೇ ಆರೋಪಿಯು ಕಲ್ಲಿನಿಂದ ಚಾಸಾ-5ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯಪಡಿಸಿ ನಿಮ್ಮನ್ನು ಜೀವಂತ ಸಹಿತ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ಮನೆಯ ಮುಂದೆ ನಿಂತಿದ್ದ ಚಾಸಾ-8ರವರಿಗೆ ಸೇರಿದ ಕಾರನ್ನು ಕಲ್ಲುಗಳಿಂದ ಆರೋಪಿ ಹೊಡೆದು ದೊಣ್ಣೆಯಿಂದ ಹೊಡೆದು ಜಖಂಗೊಳಿಸಿ 65 ಸಾವಿರ ನಷ್ಟ ಮಾಡಿರುತ್ತಾರೆ. ಈ ಸಂಬಂಧ ನಾನು ನಿಪಿ-1ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಮತ್ತು ಮರು ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ-

ಹಾಜರಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ಮತ್ತು
ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,
ರಾಮನಗರ.